**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಡಿ ಎಸ್ ಅರುಣ್, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಹಾಗೂ ಶ್ರೀ ಶಶೀಲ್ ಜಿ ನಮೋಶಿ ಇವರು ನಿಯಮ-330 ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ:**

* * * * * * * *

**ವಿಷಯ:**ದಿನಾಂಕ:2016ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದು, ದಿನಾಂಕ:01.07.2022 ಹಾಗೂ ನಂತರದಲ್ಲಿ ನಿವೃತ್ತರಾಗಿರುವ ಬೋಧಕರುಗಳ ಪಿಂಚಣಿ ಪರಿಷ್ಕರಣೆ ಕುರಿತು ಆರ್ಥಿಕ ಇಲಾಖೆಯು ದಿನಾಂಕ:30.06.2025ರಂದು ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿ ಅನುಷ್ಠಾನದಲ್ಲಿ ಉಂಟಾಗಿರುವ ಗೊಂದಲಗಳ ಬಗ್ಗೆ.

**ಉತ್ತರ:** ಸರ್ಕಾರದ ಆದೇಶ ಸಂಖ್ಯೆ:ಆಇ 41 ಎಸ್‌ಆರ್‌ಪಿ 2024, ದಿನಾಂಕ:30.06.2025ರಲ್ಲಿ ದಿನಾಂಕ:01.07.2022 ಹಾಗೂ ನಂತರದಲ್ಲಿ ನಿವೃತ್ತರಾಗಿರುವ ಬೋಧಕರುಗಳ ಪಿಂಚಣಿ ಪರಿಷ್ಕರಣೆ ಕುರಿತು ಆರ್ಥಿಕ ಇಲಾಖೆಯು ಆದೇಶ ಹೊರಡಿಸಿದ್ದು, ಸದರಿ ಆದೇಶದಲ್ಲಿ ದಿನಾಂಕ:01.07.2022ರ ನಂತರದಲ್ಲಿ ನಿವೃತ್ತರಾದ ಬೋಧಕರುಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 291-ಜಿ ಮತ್ತು ಸಂಬಂಧಿಸಿದ ನಿಯಮ ಆದೇಶಗಳನ್ವಯ ಅಥವಾ ಅನ್ವಯಿಸುವ ಕುಟುಂಬ ಪಿಂಚಣಿ ಹಾಗೂ ಅದರಡಿ ಹೊರಡಿಸಿರುವ ಆದೇಶಗಳ ಅವಕಾಶಗಳನ್ವಯ ಪರಿಗಣಿಸಿ ನಿಗದಿಪಡಿಸಿದ್ದು, ನಿವೃತ್ತ ನೌಕರರಿಗೆ ಈ ಆದೇಶವು ನೈಜವಾಗಿ ನಿವೃತ್ತರಾದ ಅಥವಾ ಸೇವೆಯಲ್ಲಿರುವುದು ಕೊನೆಗೊಂಡ ದಿನಾಂಕದ ಮರುದಿನದಿಂದ ಅಥವಾ ದಿನಾಂಕ:01.08.2024ರಿಂದ ಇದರಲ್ಲಿ ಯಾವುದು ನಂತರವೋ ಆ ದಿನಾಂಕದಿಂದ ಜಾರಿಗೆ ಬರುವಂತೆ ಆದೇಶಿಸಿರುತ್ತದೆ. ಸದರಿ ಆದೇಶದಲ್ಲಿ ಪಿಂಚಣಿ ಪರಿಷ್ಕರಣೆ ಹಾಗೂ ನಿವೃತ್ತಿ ವೇತನದ ಅಸಮಾನತೆಯನ್ನು ಸರಿಪಡಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅರ್ಹ ಬೋಧಕರುಗಳಿಗೆ ಪಿಂಚಣಿ ಪರಿಷ್ಕರಣೆ ಸಂಬಂಧ ಸ್ವೀಕೃತಿಯಾಗಿರುವ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ಮಹಾಲೇಖಪಾಲರಿಗೆ ಕಳುಹಿಸಿಕೊಡಲು ಕ್ರಮವಹಿಸಲಾಗಿದೆ.

2003ರಲ್ಲಿ ನೇಮಕಾತಿ ಹೊಂದಿ ನಿವೃತ್ತರಾದ (Part time regular) ಅಧ್ಯಾಪಕರಿಗೆ ಪಿಂಚಣಿ ಪರಿಷ್ಕರಿಸುವಾಗ ಕಡಿಮೆ ಸೇವಾವಧಿಯನ್ನು ಹೊಂದಿದ್ದು ಪಿಂಚಣಿ ಪರಿಷ್ಕರಣೆ ನಂತರ ಕಡಿಮೆ ಪಿಂಚಣಿ ನಿಗಧಿಯಾಗುತ್ತದೆ. ದಿನಾಂಕ:30-06-2025ರ ಆದೇಶದಲ್ಲಿ ಗುಣಾಕಾರಾಂಶವನ್ನು ಅಳವಡಿಸದೇ ಇರುವುದರಿಂದ ದಿನಾಂಕ:01-07-2022ರ ಪೂರ್ವದಲ್ಲಿ ನಿವೃತ್ತರಾದ ಬೋಧಕರುಗಳಿಗೆ ಪಿಂಚಣಿಯು ದಿನಾಂಕ:28-08-2024ರ ಆದೇಶದನ್ವಯ ಪರಿಷ್ಕರಣೆಯಾಗುತ್ತದೆ. ಆದರೆ ದಿನಾಂಕ:01-07-2022ರ ನಂತರದಲ್ಲಿ ನಿವೃತ್ತರಾದ ಬೋಧಕರುಗಳಿಗೆ ಗುಣಾಕಾರಾಂಶವನ್ನು (Corrective Factor) ಅಳವಡಿಸದೇ ಇರುವುದರಿಂದ ಕಿರಿಯ ನೌಕರರಿಗಿಂತ ಹಿರಿಯ ನೌಕರರಿಗೆ ಕಡಿಮೆ ಪಿಂಚಣಿ ನಿಗದಿಯಾಗುತ್ತಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ, ನಿವೃತ್ತ ಅಧ್ಯಾಪಕರುಗಳಿಂದ ಹಾಗೂ ನಿವೃತ್ತ ಅಧ್ಯಾಪಕರ ಸಂಘದಿಂದ ಮನವಿಗಳು ಸ್ವೀಕೃತವಾಗುತ್ತಿದ್ದು, ತತ್ಸಂಬಂಧ ಪರಿಶೀಲಿಸಲಾಗುತ್ತಿದೆ.

**ಸಂಖ್ಯೆ: ಇಡಿ 429 ಡಿಸಿಇ 2025(ಇ)**

(ಡಾ. ಎಂ. ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು